# ನಂಬುವಂಥ ಕಥೆ ಬರೆಯುವೆ

**ನಿನಾದ್ ಹರಿತ**
**ಸ್ಟಾರ್ ಸುವರ್ಣ 'ಆಸೆ'ಯ ಸೂರ್ಯ**



◆ **ನಿಮ್ಮ ಆಸೆ ಏನಿತ್ತು?**

ನನ್ನ ತಂದೆ–ತಾಯಿ ರಂಗಭೂಮಿ ಕಲಾವಿದರಾಗಿದ್ದರು. ಹಾಗಾಗಿ ನನಗೆ ಬಾಲ್ಯದಲ್ಲಿಯೇ ನಟಿಸುವ ಅವಕಾಶ ಸಿಕ್ಕಿತು. ಅದಾದ ಮೇಲೆ ನನಗೆ ಅಭಿನಯದ ಗುಂಗು ಹೆಚ್ಚಾಯಿತು. ಅದರಲ್ಲಿ ಮಜಾ ಇದೆ. ಏನೋ ತೃಪ್ತಿಯ ಭಾವ ಅಲ್ಲಿದೆ ಎನ್ನುವುದು ಕಾಡಲು ಶುರುವಾಯಿತು. ಆಕಸ್ಮಿಕವಾಗಿ ಸಿಕ್ಕ ಅವಕಾಶದಿಂದ ಆದ ಖುಷಿ ನನ್ನನ್ನು ಪುಳಕಿತನನ್ನಾಗಿ ಮಾಡಿತ್ತು. ಜೀವನದಲ್ಲಿ ಏನಾದರು ಆಗುವುದೇ ಆದರೆ ನಟನೇ ಆಗಬೇಕು ಎನ್ನುವ ಸಂಕಲ್ಪವನ್ನು ನನ್ನ 7ನೇ ವರ್ಷದಲ್ಲೇ ಮಾಡಿದ್ದೆ. ಅಭಿನಯ ರಂಗದಲ್ಲೇ ಹತ್ತು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಒಟ್ಟಾರೆ ಖುಷಿಯಾಗಿದ್ದೇನೆ.

◆ **ಕಿರುತೆರೆಯ ದಾರಿ ಹಿಡಿದಿದ್ದು ಹೇಗೆ?**

ಮೂಲತಃ ರಂಗಭೂಮಿ ಕಲಾವಿದ. ನಟನೆಯನ್ನು ವೃತ್ತಿಯನ್ನಾಗಿ ಸ್ವೀಕರಿಸುವ ಪೂರ್ವದಲ್ಲೇ ನಾಲ್ಕು ವರ್ಷ ಹವ್ಯಾಸಿ ಕಲಾವಿದನಾಗಿ ಕೆಲಸ ಮಾಡಿದ್ದೇನೆ. ನಂತರ ಟೀವಿ ತೆರೆಗೆ ಬಂದೆ. ನನಗೆ ಮೊದಲ ಅವಕಾಶ ಸಿಕ್ಕಿದ್ದು 'ಅರಮನೆ'ಯಲ್ಲಿ, ನಾಯಕಿಯ ತಮ್ಮನಾಗಿದ್ದೆ. ಆ ಹೊಸ ಅನುಭವ ನನಗೆ ಮತ್ತಷ್ಟು ಹುಮ್ಮಸ್ಸನ್ನು ತುಂಬಿತು. ಅದರ ಬೆನ್ನಿಗೆ 'ಬಿಳಿ ಹೆಂಡ್ತಿ'ಯಲ್ಲೂ ಪುಟ್ಟ ಪಾತ್ರವನ್ನೇ ಮಾಡಿದೆ. ಆನಂತರ ಮುಂದೆ ಪ್ರಧಾನ ಪಾತ್ರವನ್ನೇ ಮಾಡಬೇಕು ಎಂದು ಅರಸುತ್ತಿದ್ದೆ. ಸಾಕಷ್ಟು ಆಡಿಷನ್ ನೀಡಿದ ಮೇಲೆ 'ನಾಗಿಣಿ 2'ರಲ್ಲಿ ಅಂತಹ ಅವಕಾಶ ಸಿಕ್ಕಿತು. ಅದು ನನ್ನ ಆಸೆಗೆ ಪೂರಕವಾಗಿ ಇತ್ತು. ಈಗ 'ಆಸೆ'ಯಲ್ಲಿ ಪ್ರಮುಖ ಪಾತ್ರವನ್ನು ಮಾಡುತ್ತಿದ್ದೇನೆ.

◆ **ಸೂರ್ಯ ಪಾತ್ರ ನಿಮಗೆ ಇಷ್ಟ ಆಗ್ತಿದೆಯಾ?**

ಧಾರಾವಾಹಿಗಳ ನಿರ್ಮಾಣ ಕಾರ್ಯದಲ್ಲಿ ಸಾಮಾನ್ಯವಾಗಿ ನಟರಿಗೆ ದೊಡ್ಡ ಪಾಲು ಇರುವುದಿಲ್ಲ. ತಂತ್ರಜ್ಞರು ಮತ್ತು ಸ್ಕ್ರಿಪ್ಟ್, ನಿರ್ದೇಶನದ ಮೇಲೆ ಅದು ನಿರ್ಧಾರವಾಗುತ್ತದೆ. ಜೊತೆಗೆ ವಾಹಿನಿಯ ಚಿಂತನೆ ಕೂಡ ಪ್ರಧಾನವಾಗುತ್ತದೆ. ಅಂದರೆ ಧಾರಾವಾಹಿಯ ನಿರ್ಮಾಣ ತೆರೆಯ ಹಿಂದೆ ಹೆಚ್ಚಿರುತ್ತದೆ. ಅದೃಷ್ಟವೋ ಏನೋ ನನಗೆ ಸೂಕ್ತವಾಗುವ ಮತ್ತು ಮಹತ್ವದ ಪಾತ್ರ ಇಲ್ಲಿ ಸಿಕ್ಕಿದೆ. ಅದಕ್ಕೆ ಸಂಪೂರ್ಣ ನ್ಯಾಯವನ್ನು ಸಲ್ಲಿಸಬೇಕು ಎಂದೇ ನನ್ನ ಕೆಲಸವನ್ನು ನಿರ್ವಹಿಸುತ್ತಿದ್ದೇನೆ. ಕನ್ನಡಿ ಮುಂದೆ ನಿಂತರೆ ನಾನೇ ನನ್ನ ಪಾತ್ರವನ್ನು ಒಪ್ಪುವಂತೆ ಅನ್ನಿಸುವಷ್ಟು ಪರಿಣಾಮಕಾರಿ ಆಗಿದೆ ಎಂದು ನನಗೆ ಅನ್ನಿಸಿದೆ. ಹಾಗೆಂದು ನನ್ನ ವ್ಯಕ್ತಿತ್ವದ ಬಿಂಬವೇ ಅಲ್ಲಿ ಕಾಣುತ್ತಿದೆ ಎಂದೇನೂ ಇಲ್ಲ. ವೈಯಕ್ತಿಕವಾಗಿ ಪಾತ್ರ ನನ್ನ ವ್ಯಕ್ತಿತ್ವಕ್ಕೆ ಭಿನ್ನವಾಗಿದ್ದರೂ ಒಂದಿಷ್ಟು ಹೋಲಿಕೆ ಎಲ್ಲೋ ಆಗುತ್ತಿದೆ. ಒಂದು ಕಲಾಕೃತಿಯಾಗಿ ನನಗೆ ಹಿಡಿಸಿದೆ. ಸೂರ್ಯ ಎಂತಹ ಅಪಾಯ ಇದ್ದರೂ ತಕ್ಷಣವೇ ಪ್ರತಿಕ್ರಿಯೆ ನೀಡುತ್ತಾನೆ. ನಾನು ತಕ್ಷಣ ಪ್ರತ್ಯುತ್ತರ ನೀಡಲು ಬಯಸುವುದಿಲ್ಲ. ಸಾಧ್ಯವಾದಷ್ಟು ಸಮಸ್ಯೆಯ ತಂಟೆಗೆ ಹೋಗುವುದಿಲ್ಲ. ಮೌನವನ್ನು ಪ್ರೀತಿಸುತ್ತೇನೆ. ಸೂರ್ಯನಲ್ಲಿ ಅನೇಕ ಏರಿಳಿತಗಳು ಗೋಚರಿಸುತ್ತವೆ. ಅದನ್ನು ತೆರೆಯ ಮೇಲೆ ನೋಡುವುದೇ ಚಂದ. ಒಟ್ಟಾರೆ ಕುತೂಹಲದ ವ್ಯಕ್ತಿತ್ವ ಅವನದು.

◆ **ಪಾತ್ರ ಅಂದರೆ ಹೇಗಿರಬೇಕು ಎನ್ನುತ್ತೀರಿ?**

ಕಲೆಯ ಹರವು, ಅದರ ಆಳ–ಅಗಲದ ವ್ಯಾಪ್ತಿ ದೊಡ್ಡದು. ಅಂಕೆಗೆ ನಿಲುಕದ ನಕ್ಷದಷ್ಟೇ ವಿಸ್ತಾರದ ಆಯಾಮ ಅದಕ್ಕಿದೆ. ಕಲೆ ಬಹುರೂಪ ಮತ್ತು ಬಹುಸಂಸ್ಕೃತಿಯ ಅಂತರಾತ್ಮವನ್ನು ಒಳಗೊಂಡಿರುತ್ತದೆ. ನಾನೊಬ್ಬ ಕಲಾವಿದನಾಗಿ ಯಾವುದೇ ಕಲಾಕೃತಿಯಲ್ಲಿ ಅಂತಹ ವೈವಿಧ್ಯವನ್ನು ಇಷ್ಟಪಡುತ್ತೇನೆ. ಸಿನಿಮಾ ಎಂದು ತೆಗೆದುಕೊಂಡರೆ, ನನಗೆ ಮಲೆಯಾಳಂ ಹಾಗೂ ಕೊರಿಯನ್ ಸಿನಿಮಾ ಎರಡನ್ನೂ ಇಷ್ಟಪಡುತ್ತೇನೆ. ಅಲ್ಲಿ ನನ್ನ ನಿರೀಕ್ಷೆ ಏನೆಂದರೆ, ವೀಕ್ಷಕನಾಗಿ ನಾನು ಜಾಗೃತನಾಗಿದ್ದರೆ ಅಷ್ಟೇ ಸಾಕು ಎಂದು ಬಯಸುತ್ತೇನೆ. ನಟನಾಗಿ ಹೇಳುವುದಾದರೆ ಪಾತ್ರ ಯಾವುದಾದರೂ ಸರಿ, ಇಷ್ಟ ಆಗಬೇಕು. ಯಾವುದೇ ಮಾಧ್ಯಮ ಆದರೂ ಅಷ್ಟೆ. ಭವಿಷ್ಯದಲ್ಲಿ ಸಿನಿಮಾದಲ್ಲೇ ಆದರೂ ಈ ನನ್ನ ಮೂಲತತ್ವದಲ್ಲಿ ಯಾವುದೇ ಬದಲಾವಣೆ ಇಲ್ಲ. ನಾನು ಯಾರ ಜೊತೆ ಕೆಲಸ ಮಾಡುತ್ತಿದ್ದೇನೆ ಎನ್ನುವುದಕ್ಕಿಂತ ಕೆಲಸದಲ್ಲಿ ತೃಪ್ತಿ ಇದೆಯೇ ಎನ್ನುವುದು ಮುಖ್ಯ ಆಗುತ್ತದೆ.

◆ **ಸಿನಿಮಾಕ್ಕೆ ಕಥೆ ಕೊಡಿ ಎಂದು ನಿಮಗೆ ಕೇಳಿದರೆ?**

ಅಂತಹ ಸಂದರ್ಭ ಬಂದರೆ ಖಂಡಿತ ಸ್ವೀಕರಿಸುತ್ತೇನೆ. ಆಗ ತಾಂತ್ರಿಕವಾಗಿ ಕೆಲಸ ಮಾಡಲು ಸಿದ್ಧತೆಯನ್ನು ಮಾಡಿಕೊಳ್ಳುತ್ತೇನೆ. ಯಾವುದೇ ಕಥೆ ಆದರೂ ಅದಕ್ಕೆ ನ್ಯಾಯ ಒದಗಿಸುವಂತೆ ರೂಪಿಸುತ್ತೇನೆ. ಅಂತಿಮವಾಗಿ ವೀಕ್ಷಕರಿಗೆ ಇಷ್ಟ ಆಗಬೇಕು. ಅವರಿಗೆ ಒಂದು ಸಂಗತಿಯನ್ನು ನಂಬಿಸುವ ಕೆಲಸವನ್ನು ಮಾಡಬೇಕು. ಅಂತಹ ಕಥೆಯನ್ನೇ ಬರೆಯುತ್ತೇನೆ. ನಮ್ಮ ಕಲ್ಪನೆ ಅವರಿಗೆ ಅನುಭವಕ್ಕೆ ದಕ್ಕುವಂತೆ ಮಾಡುವ ಕೆಲಸವನ್ನು ಮಾಡುತ್ತೇನೆ.

■ **ರಾಘವೇಂದ್ರ ಕೆ.**